2113457/2021
06/01/2021

ರಾಜೀವ್ ಚಾವ್ಲಾ, ಭಾ.ಆ.ಸೇ.,
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಇ-ಆಡಳಿತ) ಹಾಗೂ
ಮಿಷನ್ ನಿರ್ದೇಶಕರು, ಸಕಾಲ

ಕರ್ನಾಟಕ ಸರ್ಕಾರದ ಸಚಿವಾಲಯ
ಕೊಠಡಿ ಸಂಖ್ಯೆ: 106, 1ನೇ ಮಹಡಿ, 2ನೇ ಗೇಟ್
ಬಹುಮಹಡಿ ಕಟ್ಟಡ, ಬೆಂಗಳೂರು-560 001
ಕಛೇರಿ ದೂರವಾಣಿ: 080-22032633/22353953
ಫ್ಯಾಕ್ಸ್ : 22259109
ಇ-ಮೇಲ್: acsegov@karnataka.gov.in

**ಅ.ಸ.ಪತ್ರ ಸಂಖ್ಯೆ: ಸಿಆಸುಇ 233 ಇಜಿವಿ 2020** ದಿನಾಂಕ: 05-01-2021

ಪ್ರಿಯ ಶ್ರೀ ಜಾವೇದ್ ಅಖ್ತರ್ ರವರೇ,

ವಿಷಯ: ಮಾಹಿತಿ ಕಣಜ ತಂತ್ರಾಂಶ ಕುರಿತು.
ಉಲ್ಲೇಖ: ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 233 ಇಜಿವಿ 2020, ದಿನಾಂಕ: 24-9-2020

******

2020-21ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 271ರನ್ವಯ ರಾಜ್ಯದ ನಾಗರಿಕರು ಜಾಲತಾಣದ ಮೂಲಕ ಮಾಹಿತಿ ಹಕ್ಕು ಕಾಯ್ದೆಯಡಿ ಅರ್ಜಿ ಸಲ್ಲಿಸಲು ಮತ್ತು ಮಾಹಿತಿ ಪಡೆಯಲು ಸಾಧ್ಯವಾಗುವ ನಿಟ್ಟಿನಲ್ಲಿ "ಮಾಹಿತಿ ಕಣಜ" ಎಂಬ ಏಕರೂಪ ತಂತ್ರಾಂಶವನ್ನು ಇ-ಆಡಳಿತ ಕೇಂದ್ರದ ಮುಖಾಂತರ ಅಭಿವೃದ್ಧಿ ಪಡಿಸಿ ಎಲ್ಲಾ ಇಲಾಖೆ / ಸಂಸ್ಥೆಗಳಿಗೆ ವಿಸ್ತರಿಸಿ ಅನುಷ್ಠಾನಗೊಳಿಸಲು ಉಲ್ಲೇಖಿತ ಸರ್ಕಾರಿ ಆದೇಶದಲ್ಲಿ ಆಡಳಿತಾತ್ಮಕ ಮಂಜೂರಾತಿ ನೀಡಿ ಆದೇಶಿಸಿದೆ.

ಆದ್ದರಿಂದ, ಎಲ್ಲಾ ಇಲಾಖೆಗಳ ಮಾಹಿತಿಯನ್ನು ಇ-ಆಡಳಿತ ಕೇಂದ್ರಕ್ಕೆ ನಿಯಮಿತವಾಗಿ ಒದಗಿಸಿ, ಆಗಿಂದಾಗ್ಗೆ ಕಾಲೋಚಿತಗೊಳಿಸಲು ಸಚಿವಾಲಯ ಹಾಗೂ ಇಲಾಖಾ ಮಟ್ಟದಲ್ಲಿ ಪ್ರತ್ಯೇಕವಾಗಿ ಒಬ್ಬೊಬ್ಬ ನೋಡಲ್ ಅಧಿಕಾರಿಯನ್ನು ನೇಮಿಸಬೇಕಾಗಿರುತ್ತದೆ. ಆದ್ದರಿಂದ, ಈ ಕೆಳಕಂಡ ನಮೂನೆಗಳಲ್ಲಿ ಸಮಗ್ರ ಮಾಹಿತಿಯನ್ನು ಕನ್ನಡ (Unicode Tunga font size-12) ಮತ್ತು ಆಂಗ್ಲ (Times New Roman font size-13) ಭಾಷೆಗಳಲ್ಲಿ (Hard and soft copy) ಒದಗಿಸುವಂತೆ ಕೋರುತ್ತೇನೆ.

ಈ ಕೆಳಕಂಡ ನಮೂನೆಗಳಲ್ಲಿ ಒದಗಿಸುವ ಮಾಹಿತಿಗಳನ್ನು ಮುಖ್ಯ ಕಾರ್ಯನಿರ್ವಹಣಾಧಿಕಾರಿ,ಇ-ಆಡಳಿತ ಕೇಂದ್ರ, ಬಹುಮಹಡಿಗಳ ಕಟ್ಟಡ, ಬೆಂಗಳೂರು ಇವರಿಗೆ ಕಳುಹಿಸಿ ಕೊಡಲು ಸಂಬಂದಪಟ್ಟವರಿಗೆ ಸೂಚಿಸಬೇಕೆಂದು ಹಾಗೂ ವಿವರಗಳನ್ನು ಇ-ಮೇಲ್ ವಿಳಾಸ: **pdmk@karnataka.gov.in** ಕ್ಕೂ ಕಳುಹಿಸಬೇಕೆಂದು ಕೋರುತ್ತೇನೆ. ಹೆಚ್ಚಿನ ಮಾಹಿತಿಗಾಗಿ ಯೋಜನಾ ನಿರ್ದೇಶಕರು, ಮಾಹಿತಿ ಕಣಜ ತಂತ್ರಾಂಶ, ಇ-ಆಡಳಿತ ಕೇಂದ್ರ, ಕೊಠಡಿ ಸಂಖ್ಯೆ: 110, ಬಹುಮಹಡಿಗಳ ಕಟ್ಟಡ, ಬೆಂಗಳೂರು – ದೂರವಾಣಿ ಸಂಖ್ಯೆ: 080- 22353999 ಇವರನ್ನು ಸಂಪರ್ಕಿಸಬಹುದು.

## ನಮೂನೆ

ಸಚಿವಾಲಯ / ಕ್ಷೇತ್ರ ಇಲಾಖೆ / ನಿಗಮ / ಮಂಡಳಿ / ಆಯೋಗ / ಪ್ರಾಧಿಕಾರ ಸ್ವಾಯತ್ತ ಸಂಸ್ಥೆಗಳು ಮತ್ತು ಸರ್ಕಾರದಿಂದ ಭಾಗಶ: / ಪೂರ್ಣ ಅನುದಾನ ಪಡೆಯುವ ಸಂಸ್ಥೆಗಳು

| ಅಧಿಕಾರಿಯ ಹೆಸರು | ಪದನಾಮ | ಮೊಬೈಲ್ ಸಂಖ್ಯೆ | ಇ-ಮೇಲ್ ಐ.ಡಿ |
|---|---|---|---|
| | | | |

ಶುಭಾಶಯಗಳೊಂದಿಗೆ,

ತಮ್ಮ ವಿಶ್ವಾಸಿ,

6/1

ಶ್ರೀ ಜಾವೇದ್ ಅಖ್ತರ್, ಭಾ.ಆ.ಸೇ
ಸರ್ಕಾರದ ಅಪರ ಮುಖ್ಯಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ವಿಕಾಸಸೌಧ,ಬೆಂಗಳೂರು.

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಶಾಖೆ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ದಿನಾಂಕ:

ಸಂಖ್ಯೆ: